## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:25-06-2015ರ ನಡವಳಿಗಳು

### ವಿಷಯದ ಸಂಖ್ಯೆ : 109 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳನ್ನು ದುರಸ್ಥಿ ಪಡಿಸಲು ರಸ್ತೆ ಮೂಲಭೂತ ಸೌಕರ್ಯ ವಲಯದಿಂದ ಕರೆದಿರುವ ಟೆಂಡರ್‌ಗಳಿಗೆ ಅನುಮೋದನೆ ಕೋರಿ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 10,000 ಕಿ.ಮೀ ರಸ್ತೆ ಜಾಲವಿದ್ದು, ಇದರಲ್ಲಿ ಸುಮಾರು 1940 ಕಿಮೀ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳಾಗಿರುತ್ತವೆ.

ಬೆಂಗಳೂರು ನಗರದಲ್ಲಿ ಇತ್ತೀಚಿನ ಮಳೆಯಿಂದಾಗಿ ರಸ್ತೆ ಮೇಲ್ಮೈ ಹಾಳಾಗಿದ್ದು, ಸಾರ್ವಜನಿಕರಿಗೆ ಹಾಗೂ ಸುಗಮ ವಾಹನ ಸಂಚಾರಕ್ಕೆ ತುಂಬಾ ಅಡಚಣೆಯಾಗುತ್ತಿದ್ದು, ರಸ್ತೆಗಳು ತೀವ್ರ ಹದಗೆಟ್ಟಿರುವ ಬಗ್ಗೆ ದೃಶ್ಯ ಮಾಧ್ಯಮಗಳಲ್ಲಿ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ಟೀಕೆ ಟಿಪ್ಪಣಿಗಳು ಪ್ರಕಟಗೊಂಡಿರುತ್ತವೆ. ಮಾನ್ಯ ಸಾರಿಗೆ ಸಚಿವರು ಹಾಗೂ ಬೆಂಗಳೂರು ನಗರ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಚರ್ಚಿಸಿದಂತೆ ಮಾನ್ಯ ಆಡಳಿತಗಾರರು ಪಾಲಿಕೆ ವ್ಯಾಪ್ತಿಯ ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ತಕ್ಷಣವೇ ಅಲ್ಪಾವಧಿ ಟೆಂಡರ್ ಆಹ್ವಾನಿಸುವಂತೆ ಸೂಚಿಸಿರುತ್ತಾರೆ. ಈ ಮೇರೆಗೆ ರಸ್ತೆ ಮೂಲಭೂತ ಸೌಕರ್ಯ ವಲಯದಿಂದ ಪಾಲಿಕೆ ವ್ಯಾಪ್ತಿಯ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳಲ್ಲಿನ ಹಾಳಾದ ಭಾಗಗಳನ್ನು ದುರಸ್ಥಿಪಡಿಸಲು ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚಲು ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ. ಸಂ | ಯೋಜನೆ ಹೆಸರು | ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಸಂಖ್ಯೆ | ಅತೀ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂ. ಲಕ್ಷಗಳಲ್ಲಿ) | 2014-15ನೇ ಸಾಲಿನ ದರಗಳಿಗೆ ಹೋಲಿಸಿದಾಗ | 2014-15ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ (ದರ ಪಟ್ಟಿ ದಿನಾಂಕ 30.03.2015) | ಸಂಧಾನದ ನಂತರ ನಮೂದಿಸಿದ ಮೊತ್ತ (ರೂ. ಲಕ್ಷಗಳಲ್ಲಿ) | ಸಂಧಾನದ ನಂತರ ನಮೂದಿಸಿದ ಮೊತ್ತ (ಶೇ. ವಾರು) |
|---|---|---|---|---|---|---|---|---|---|
| 1 | ಪಶ್ಚಿಮ ವಲಯದ ಚಾಮರಾಜಪೇಟೆ, ಗಾಂಧಿನಗರ ಹಾಗು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಹಾಳಾದ ಭಾಗಗಳನ್ನು ಡಾಂಬರೀಕರಣಗೊಳಿಸುವುದು. | 1 | ಶ್ರೀ. ಎಂ.ಎಸ್ ವೆಂಕಟೇಶ್ | 36.3 | 34.78 | 4.09 ಕಡಿಮೆ | 23.75 ಹೆಚ್ಚು | 30.91 | 9.99 |

................................2

| | | | | | | | | | |
|---|---|---|---|---|---|---|---|---|---|
| 2 | ಪಶ್ಚಿಮ ವಲಯದ ರಾಜಾಜಿನಗರ, ಮಹಾಲಕ್ಷ್ಮೀಪುರಂ ಹಾಗು ಗೋವಿಂದರಾಜನಗರ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಹಾಳಾದ ಭಾಗಗಳನ್ನು ಡಾಂಬರೀಕರಣಗೊಳಿಸುವುದು. | 1 | ಶ್ರೀ ಎಂ.ಎಸ್.ವೆಂಕಟೇಶ್ | 38.65 | 36.56 | 5.39 ಕಡಿಮೆ | 19.38 ಹೆಚ್ಚು | 33.55 | 9.99 ಹೆಚ್ಚು |
| 3 | ದಕ್ಷಿಣ ವಲಯದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಹಾಳಾದ ಭಾಗಗಳನ್ನು ಡಾಂಬರೀಕರಣಗೊಳಿಸುವುದು. | 3 | ಶ್ರೀ.ಸತೀಶ್ .ಎಸ್ | 31.5 | 33.77 | 7.69 ಹೆಚ್ಚು | 28.11 ಹೆಚ್ಚು | 28.68 | 8.82 ಹೆಚ್ಚು |
| 4 | ಮಹದೇವಪುರ ವಲಯದ ವ್ಯಾಪ್ತಿಯ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಹಾಳಾದ ಭಾಗಗಳನ್ನು ಡಾಂಬರೀಕರಣಗೊಳಿಸುವುದು | 1 | ಶ್ರೀ ಗೋಪಾಲ ಕೃಷ್ಣ | 49.5 | 47.26 | 4.00 ಕಡಿಮೆ | 41.1 | 44.81 | 9.00 ಹೆಚ್ಚು |

ಮೇಲ್ಕಂಡ ಕಾಮಗಾರಿಗಳ ಟೆಂಡರ್‌ಗಳಿಗೆ ಗುತ್ತಿಗೆದಾರರು ಪ್ರತಿಕ್ರಿಯಿಸಿರುವುದು ಸ್ಪರ್ಧಾತ್ಮಕವಾಗಿರುತ್ತವೆ. ಆದುದರಿಂದ, ಸದರಿ ಟೆಂಡರ್‌ನಲ್ಲಿ ಅತಿ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಿದ ನಂತರದ ಸಂಧಾನಿತ ಮೊತ್ತವು ಶೇಕಡ 8% ಕ್ಕಿಂತ ಹೆಚ್ಚುವರಿಯಾಗಿರುವುದರಿಂದ, ಟೆಂಡರ್ ಮೊತ್ತಕ್ಕೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-06-2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

# ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:25-06-2015 ರ ನಡವಳಿಗಳು

## ವಿಷಯದ ಸಂಖ್ಯೆ : 110 / 2015-16

**ವಿಷಯ:** Restoration work for road cut portion by GAIL from ITPL to BBMP limits via Hopeform circle , Kadugodi ಕಾಮಗಾರಿಯ ಟೆಂಡರ್ ಅನುಮೋದನೆ ಕೋರಿ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹದೇವಪುರ ವಲಯದ ಐ.ಟಿ.ಪಿ.ಎಲ್ ನಿಂದ ಹೋಪ್‌ಫಾರಂ ಕಾಡುಗೋಡಿ ಮಾರ್ಗವಾಗಿ ಬಿಬಿಎಂಪಿ ಗಡಿಯ 4.60 ಕಿ.ಮೀ. ರಸ್ತೆ ಭಾಗದಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಲು M/s GAIL ರವರು ರಸ್ತೆ ಅಗೆತವನ್ನು ಕೈಗೊಂಡು ಬಹುತೇಕ ಕಾಮಗಾರಿಯು ಪೂರ್ಣಗೊಂಡಿರುವುದಾಗಿ ವರದಿ ನೀಡಿದ್ದು, ಸದರಿ ಅಗೆದ ರಸ್ತೆಯನ್ನು ಪುನಶ್ಚೇತನಗೊಳಿಸಲು M/s GAIL ಸಂಸ್ಥೆರವರು ಈಗಾಗಲೇ ರೂ.203.00 ಲಕ್ಷವನ್ನು ಪಾಲಿಕೆಗೆ ಪಾವತಿಸಿದ್ದು, ಕಾಮಗಾರಿ ಅಂದಾಜಿಗೆ P-2348 Deposit Contribution ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಾಬ್ ಕೋಡ್ ಸಂಖ್ಯೆ:083-15-000035 ಯನ್ನು ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:58/2015-16 ದಿನಾಂಕ:13.05.2015 ರಂದು ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ನೀಡಿರುತ್ತಾರೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು (ರಮೂಸೌ-ಮಹದೇವಪುರ ವಿಭಾಗ) ರವರು e-Procurement ಮುಖೇನ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಒಟ್ಟು 3 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ತಾಂತ್ರಿಕ ಬಿಡ್‌ನಲ್ಲಿ 3 ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ.ಜಿ.ಚಂದ್ರಶೇಖರ್ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡತಿರುತ್ತದೆ.

| ಕ್ರ.ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ ಗಳಲ್ಲಿ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡವಾರು ಹೆಚ್ಚು/ಕಡಿಮೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ | ಶೇಕಡವಾರು ಹೆಚ್ಚು/ಕಡಿಮೆ(2014-15 ನೇಸಾಲಿನ ನೀಡಿಕೆ ದರ ದಿನಾಂಕ:25.03.2015) | ಷರಾ |
|---|---|---|---|---|---|---|
| 1 | ಶ್ರೀ.ಜಿ.ಚಂದ್ರಶೇಖರ್ | 1,73,60,237/- | 1,63,68,546/- | 5.71% ಕಡಿಮೆ | 4.54% ಹೆಚ್ಚುವರಿ | L-1 |
| 2 | ಶ್ರೀ.ವಿ.ಎಲ್ ಮುನಿರಾಜು | | 1,64,12,371/- | 5.46% ಕಡಿಮೆ | 4.82% ಹೆಚ್ಚುವರಿ | L-2 |
| 3 | ಶ್ರೀ.ಎನ್.ವೆಂಕಟಚಾಲಪತಿ | | 1,73,58,643/- | 0.01% ಕಡಿಮೆ | 10.86% ಹೆಚ್ಚುವರಿ | L-3 |

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ (L-1) ಗುತ್ತಿಗೆದಾರರಾದ ಶ್ರೀ.ಜಿ.ಚಂದ್ರಶೇಖರ್‌ರವರ ಟೆಂಡರ್ ಅನ್ನು 2014-15 ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ನೀಡಿಕೆ ದರಗಳು ದಿನಾಂಕ:25.03.2015 ರೊಂದಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 4.54% ರಷ್ಟು ಹೆಚ್ಚುವರಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಜಿ.ಚಂದ್ರಶೇಖರ್ ರವರ ಗುತ್ತಿಗೆ ಮೊತ್ತ ರೂ. **1,63,68,546/-** (ಒಂದು ಕೋಟಿ ಅರವತ್ತಮೂರು ಲಕ್ಷದ ಅರವತ್ತೆಂಟು ಸಾವಿರದ ಐನೂರ ನಲವತ್ತಾರು) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:24-06-2015 ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು